## 'ಬ್ರೇಕಿಂಗ್ ನ್ಯೂಸ್'ನಲ್ಲಿ ನಾಗತಿಹಳ್ಳಿ!




ಶೀರ್ಷಿಕೆ ನೋಡಿ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ವಿವಾದವೊಂದರಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಊಹಿಸುವಂತಿಲ್ಲ. ಇದು ಅವರ ಹೊಸ ಸಿನಿಮಾದ ಸುದ್ದಿ. ಪ್ರಯೋಗಶೀಲ ಚಿತ್ರಗಳ ನಿರ್ದೇಶಕ ನಾಗತಿಹಳ್ಳಿ ತಮ್ಮ ಹೊಸ ಚಿತ್ರಕ್ಕೆ ನಾಮಕರಣ ಮಾಡಿರುವ ಹೆಸರು– 'ಬ್ರೇಕಿಂಗ್ ನ್ಯೂಸ್'.

ಮಾಧ್ಯಮಗಳ ತವಕ ತಲ್ಲಣಗಳೇ ಚಿತ್ರದ ಕಥನ. ಇದೊಂದು ರಮಣೀಯ ಪ್ರೇಮಕಥನವೂ ಹೌದು ಎನ್ನುವುದು ನಿರ್ದೇಶಕರ ಅಡಿ ಟಿಪ್ಪಣಿ. ಹಾಸ್ಯಕ್ಕೆ ಕೂಡ ಸಾಕಷ್ಟು ಅವಕಾಶವಿದೆ ಎಂದಿರುವ ನಿರ್ದೇಶಕರು, ತಮ್ಮ ಹೊಸಚಿತ್ರಕ್ಕೆ ಅಜಯ್‌ರಾವ್ ಹಾಗೂ ರಾಧಿಕಾ ಪಂಡಿತ್‌ರನ್ನು ಜೋಡಿಯಾಗಿ ಆರಿಸಿದ್ದಾರೆ. ಇಬ್ಬರೂ ಪ್ರತಿಭಾವಂತ ಯುವ ಕಲಾವಿದರು ಎಂದೇ ಚಿತ್ರರಂಗದಲ್ಲಿ ಗುರ್ತಿಸಿಕೊಂಡವರು. ಇಬ್ಬರ ಪಾಲಿಗೂ ನಾಗತಿಹಳ್ಳಿ ಮೇಷ್ಟ್ರಿದ್ದಂತೆ. 'ಒಲವೇ ಜೀವನ ಲೆಕ್ಕಾಚಾರ'ದಲ್ಲಿ ನಟಿಸಿದ್ದ ರಾಧಿಕಾ ಅವರಿಗೆ 'ಬ್ರೇಕಿಂಗ್ ನ್ಯೂಸ್' ನಾಗತಿಹಳ್ಳಿ ಗರಡಿಯ ಎರಡನೇ ಸಿನಿಮಾ. 'ಒಮ್ಮೆಯಾದರೂ ಮೇಷ್ಟ್ರ ಚಿತ್ರದಲ್ಲಿ ನಟಿಸಬೇಕು ಎನ್ನುವುದು ನನ್ನ ಕನಸಾಗಿತ್ತು' ಎಂದಿರುವ ಅಜಯ್‌ಗೆ ಕನಸು ನನಸಾದ ಖುಷಿ.

'ಬ್ರೇಕಿಂಗ್ ನ್ಯೂಸ್' ಮುಹೂರ್ತದ ಸಂದರ್ಭದಲ್ಲಿ ಜ್ಞಾನಪೀಠದ ಪುಳಕದಲ್ಲಿರುವ ಚಂದ್ರಶೇಖರ ಕಂಬಾರ, ನಟರಾದ ಶಿವರಾಜಕುಮಾರ್, ರಮೇಶ್ ಅರವಿಂದ್ ಹಾಗೂ ದುನಿಯಾ ವಿಜಯ್ ಭಾಗವಹಿಸಿದ್ದು ಕೂಡ ಒಂದು ಬ್ರೇಕಿಂಗ್ ನ್ಯೂಸ್ ನಂತೆ ಕಾಣುತ್ತಿತ್ತು. ತಾರೆಗಳ ಈ ಪ್ರಭಾವಳಿ, 'ನೂರು ಜನ್ಮಕೂ' ಚಿತ್ರದಲ್ಲಿ ಕಹಿಯುಂಡ ನಂತರ 'ಬ್ರೇಕಿಂಗ್ ನ್ಯೂಸ್' ಮೂಲಕ ಮತ್ತೆ ಸಿಹಿ ಕಾಣಲು ತವಕಿಸುತ್ತಿರುವ ನಾಗತಿಹಳ್ಳಿ ಅವರಿಗೆ ಉತ್ಸಾಹ ನೀಡಿದಂತಿತ್ತು.



## ಪದ್ಮಾವತಿಯ ಹೊಸ ಹಾಡು

ಸಿನಿಮಾ ಮತ್ತು ರಾಜಕಾರಣ, ಎರಡೂ ಕಾರಣಗಳಿಂದಾಗಿ ಸುದ್ದಿಯಲ್ಲಿರುವ ರಮ್ಯಾ ಇದೀಗ ವೃತ್ತಿ ಜೀವನದ ಉತ್ತುಂಗದಲ್ಲಿರುವ ನಟಿ. 'ಸಂಜು ವೆಡ್ಸ್ ಗೀತಾ'ದ ಗೆಲುವಿನಲ್ಲಿ ಅವರ ಕಾಣಿಕೆಯೂ ಇದೆ. 'ಜಾನಿ ಮೇರಾ ನಾಮ್' ಚಿತ್ರದಲ್ಲಿ 'ಊರಿಗೊಬ್ಳೇ ಪದ್ಮಾವತಿ' ಎಂದು ಕುಣಿದು ಪ್ರೇಕ್ಷಕರನ್ನು ಬೆಚ್ಚಿ ಬೀಳಿಸಿದ್ದರು. ಇಂತಿಪ್ಪ ರಮ್ಯಾ, ಪದ್ಮಾವತಿ ಮಾದರಿಯ ಮತ್ತೊಂದು ಹಾಡಿನಲ್ಲಿ ಟೊಂಕ ಬಳುಕಿಸಲು ಒಪ್ಪಿಕೊಂಡಿರುವ ಸುದ್ದಿ 'ಕ್ರೇಜಿಲೋಕ' ಚಿತ್ರತಂಡದಿಂದ ಹೊರಬಿದ್ದಿದೆ.

'ಕ್ರೇಜಿಲೋಕ' ಕವಿತಾ ಲಂಕೇಶ್ ನಿರ್ದೇಶಿಸುತ್ತಿರುವ ಸಿನಿಮಾ. ರವಿಚಂದ್ರನ್, ಡೈಸಿ ಬೋಪಣ್ಣ ಪ್ರಮುಖ ಭೂಮಿಕೆಯಲ್ಲಿರುವ ಈ ಚಿತ್ರದ ಐಟಂ ಸಾಂಗ್ ಒಂದರಲ್ಲಿ ರಮ್ಯಾ ಅಭಿನಯಿಸಲು ಒಪ್ಪಿಕೊಂಡಿದ್ದಾರಂತೆ. ಇಷ್ಟು ಮಾತ್ರವಲ್ಲ, ಪುಟ್ಟ ಪಾತ್ರವೊಂದರಲ್ಲಿ ನಟಿಸಲೂ ಅವರು 'ಹೂಂ' ಎಂದಿದ್ದಾರಂತೆ. ಅಂದಹಾಗೆ, ಕವಿರಾಜ್ ಬರೆದಿರುವ ಆ ಹಾಡನ್ನು ರಮ್ಯಾ ಓದಿದ್ದು, ಸಾಹಿತ್ಯದ ಬಗ್ಗೆ ಖುಷಿ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಪ್ರಸ್ತುತ ರಮ್ಯಾ ವಿದೇಶದಲ್ಲಿದ್ದು, ಅವರು ಬೆಂಗಳೂರಿಗೆ ಹಿಂತಿರುಗಿದ ನಂತರವೇ 'ಕ್ರೇಜಿಲೋಕ'ದ ಗರಂ ಗರಂ ಹಾಡಿನ ಚಿತ್ರೀಕರಣ ನಡೆಯಲಿದೆಯಂತೆ.

## ಪುನೀತ್ ಬಾಂಡ್!

ಒಂದು ಸಿನಿಮಾ ಮುಗಿದ ಮೇಲೆ ಇನ್ನೊಂದು ಸಿನಿಮಾ ಎನ್ನುವುದು ಪುನೀತ್ ಪಾಲಿಸಿ. ಇದಕ್ಕೆ ತಕ್ಕಂತೆ, 'ಪರಮಾತ್ಮ' ಥಿಯೇಟರ್ ಹೊಸ್ತಿಲಲ್ಲಿರುವಾಗಲೇ ಪುನೀತ್‌ರ ಹೊಸ ಚಿತ್ರ 'ಅಣ್ಣಾ ಬಾಂಡ್' ಸಂಚಲನ ಶುರುವಾಗಿದೆ. 'ಜಾಕಿ' ಚಿತ್ರದ ಬಹುದೊಡ್ಡ ಯಶಸ್ಸಿನ ನಂತರ ಪುನೀತ್ ಮತ್ತು ನಿರ್ದೇಶಕ ಸೂರಿ 'ಅಣ್ಣಾ ಬಾಂಡ್'ನಲ್ಲಿ ಒಂದಾಗಿದ್ದಾರೆ.

'ಪರಮಾತ್ಮ' ಚಿತ್ರದಲ್ಲಿ ಕನ್ನಡತಿಯರೇ ಚಿತ್ರದ ನಾಯಕಿಯರು. ಆ ಪರಂಪರೆ ಈ ಚಿತ್ರದಲ್ಲೂ ಮುಂದುವರೆದಿದೆ. ನಿಧಿ ಸುಬ್ಬಯ್ಯ ಹಾಗೂ ಪ್ರಿಯಾಮಣಿ 'ಅಣ್ಣಾ ಬಾಂಡ್' ನಾಯಕಿಯರು. ನಿಧಿ ಇದೇ ಮೊದಲ ಸಲ ಪುನೀತ್ ಜೊತೆ ನಟಿಸುತ್ತಿದ್ದರೆ, ಪ್ರಿಯಾಮಣಿ ಈ ಮೊದಲು 'ರಾಮ್' ಚಿತ್ರದಲ್ಲಿ 'ಹೊಸ ಗಾನ ಬಜಾನ' ಎಂದು ಕುಣಿದಿದ್ದ ಚೆಲುವೆ.



■ ರಘು